# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 242 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11-08-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬಳ್ಳಾರಿಯಲ್ಲಿನ ತಾರಾನಾಥ ಸರ್ಕಾರಿ ಆಯುರ್ವೇದ ಕಾಲೇಜಿನಲ್ಲಿನ ಮಂಜೂರು ಮಾಡಲಾದ ಬೋಧಕ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಮಂಜೂರಾದ ಎಷ್ಟು ಬೋಧಕ ಹುದ್ದೆಗಳು ಖಾಲಿ ಇವೆ ಹಾಗೂ ಸರ್ಕಾರವು ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲು ಉದ್ದೇಶಿಸಿದೆ:</td><td>
ಬಳ್ಳಾರಿಯಲ್ಲಿನ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಸಂಸ್ಥೆಗೆ ಮಂಜೂರು ಮಾಡಲಾದ ಬೋಧಕ ಹುದ್ದೆಗಳ ಸಂಖ್ಯೆ: 50 ಹಾಗೂ ಖಾಲಿ ಇರುವ ಬೋಧಕ ಹುದ್ದೆಗಳು ಸಂಖ್ಯೆ: 26 ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ಹುದ್ದೆಯ ಪದನಾಮ</th><th>ಮಂಜೂರು</th><th>ಭರ್ತಿ</th><th>ಖಾಲಿ</th></tr>
<tr><td>1</td><td>ಪ್ರಾಚಾರ್ಯರು</td><td>01</td><td>01</td><td>-</td></tr>
<tr><td>2</td><td>ಪ್ರಾಧ್ಯಾಪಕರು</td><td>19</td><td>09</td><td>10</td></tr>
<tr><td>3</td><td>ಸಹಪ್ರಾಧ್ಯಾಪಕರು</td><td>09</td><td>03</td><td>06</td></tr>
<tr><td>4</td><td>ಸಹಾಯಕ ಪ್ರಾಧ್ಯಾಪಕರು</td><td>21</td><td>11</td><td>10</td></tr>
<tr><td></td><td>ಒಟ್ಟು</td><td>50</td><td>24</td><td>26</td></tr>
</table>
ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಅನುಸರಿಸಿ ಎನ್.ಸಿ.ಐ.ಎಸ್.ಎಂ./ ಎನ್.ಸಿ.ಹೆಚ್.ರವರು ಮಾನದಂಡಗಳನ್ವಯ ಮಹಾವಿದ್ಯಾಲಯಗಳನ್ನು ನಡೆಸಲು ಅನುಮತಿ ನೀಡುವ ಹಿನ್ನೆಲೆಯಲ್ಲಿ ಈ ಮಾನದಂಡವನ್ನು ಅನುಸರಿಸಬೇಕಾಗಿರುವುದರಿಂದ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಆಯುಷ್ ಮಹಾವಿದ್ಯಾಲಯಗಳಲ್ಲಿ ಖಾಲಿಯಿರುವ ಸಹಾಯಕ ಪ್ರಾಧ್ಯಾಪಕರು (ಆಯು/ಯು/ಹೋ/ಪ್ರ.ಚಿ&ಯೋ) – 89 ಹುದ್ದೆಗಳನ್ನು ಹಾಗೂ ಸಹ ಪ್ರಾಧ್ಯಾಪಕರು (ಆಯು/ಯು/ಹೋ/ಪ್ರ.ಚಿ&ಯೋ) – 55 ಹುದ್ದೆಗಳನ್ನು ಹಾಗೂ ಪ್ರಾಧ್ಯಾಪಕರು (ಆಯು/ಯು/ಹೋ/ಪ್ರ.ಚಿ&ಯೋ) – 34 ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನ ಸರ್ಕಾರದ ಪರಿಶೀಲನೆಯಲ್ಲಿದೆ.<br><br>
ಸರ್ಕಾರದ ಆದೇಶ ಸಂಖ್ಯೆ: ಆಕುಕ 148 ಪಿಐಎಂ 2021 ದಿನಾಂಕ:21-12-2023ರಲ್ಲಿ ಸರ್ಕಾರಿ ಆಯುಷ್‌ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಎನ್.ಸಿ.ಐ.ಎಸ್.ಎಂ. ಕನಿಷ್ಠ ಮಾನದಂಡಗಳನುಸಾರ ತಾರಾನಾಥ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಇಲ್ಲಿನ 07 ಹುದ್ದೆಗಳು ಸೇರಿದಂತೆ ಖಾಲಿ ಇರುವ ಪ್ರಾಧ್ಯಾಪಕರು / ಸಹಪ್ರಾಧ್ಯಾಪಕರು / ಸಹಾಯಕ ಪ್ರಾಧ್ಯಾಪಕರ ವಿಷಯ / ತಜ್ಞತೆವಾರು 39 ಹುದ್ದೆಗಳಿಗೆ ಕನ್ಸಲ್ಟೆಂಟ್‌ಆಧಾರದ ಮೇಲೆ ಭರ್ತಿಮಾಡಿಕೊಳ್ಳಲು
</td></tr>
</table>

| | | |
|---|---|---|
| | | ಸರ್ಕಾರದಿಂದ ಅನುಮತಿ ನೀಡಲಾಗಿದೆ. ಅದರನ್ವಯ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ.<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನೆನಿ 2024, ದಿನಾಂಕ:25-11-2024 ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನೆನಿ 2024, ದಿನಾಂಕ:29-03-2025ರಲ್ಲಿ ರಾಜ್ಯ ಸಿವಿಲ್‌ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಹಾಗೂ ರಾಜ್ಯ ಸಿವಿಲ್‌ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರನೇಮಕಾತಿ ಮಾಡಲು ಹೊಸ ಅಧಿಸೂಚನೆಗಳನ್ನು ಹೊರಡಿಸಿದ್ದಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲು ಸೂಚಿಸಲಾಗಿದೆ.<br><br>ಆದ್ದರಿಂದ, ತಾರನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿಯನ್ನು ಒಳಗೊಂಡಂತೆ, ಬೆಂಗಳೂರು, ಶಿವಮೊಗ್ಗ ಹಾಗೂ ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು, ಇಲ್ಲಿ ಖಾಲಿ ಇರುವ ಬೋಧಕ ವರ್ಗದ ಹುದ್ದೆಗಳನ್ನು ಸರ್ಕಾರದ ಆದೇಶ ದಿನಾಂಕ:21-12-2023ರನ್ವಯ ಕನ್ಸಲ್ಟೆಂಟ್‌ಆಧಾರದ ಮೇಲೆ ಭರ್ತಿ ಮಾಡುವ ಸಂಬಂಧ ಅರ್ಜಿಗಳನ್ನುಆಹ್ವಾನಿಸಿ, ದಿನಾಂಕ:11-04-2025ರಲ್ಲಿ ನಿರ್ದೇಶನಾಲಯದಿಂದ ಹೊರಡಿಸಲಾದ ಅಧಿಸೂಚನೆಯನ್ನು ಸರ್ಕಾರದ ಮುಂದಿನ ಆದೇಶದವರೆಗೆ ಹಿಂಪಡೆದು ದಿನಾಂಕ:20-05-2025ರಲ್ಲಿ ಪ್ರಕಟಿಸಲಾಗಿದೆ. |
| | | ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದ, ಇಬ್ಬರು ಬೋಧಕರುಗಳನ್ನು ಸರ್ಕಾರವು ಅಧಿಸೂಚನೆ ಸಂಖ್ಯೆ :ಆಕುಕ 317 ಪಿಐಎಂ 2025, ದಿನಾಂಕ: 31.07.2025 ರಲ್ಲಿ ಹಿಂಪಡೆದು ಇವರಲ್ಲಿಒಬ್ಬರು ಪ್ರಾಧ್ಯಾಪಕರು (ಪಂಚಕರ್ಮ) ಇವರನ್ನು ದಿನಾಂಕ: 05-08-2025 ರಂದು ಕೌನ್ಸಿಲಿಂಗ್‌ಮುಖಾಂತರ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ ಇಲ್ಲಿಗೆ ವರ್ಗಾಯಿಸಿ ನೇಮಿಸಲಾಗಿರುತ್ತದೆ. |
| | | ಸರ್ಕಾರದ ಆದೇಶ ಸಂಖ್ಯೆ:ಆಕುಕ 192 ಪಿಐಎಂ 2021 ದಿನಾಂಕ:02-09-2023 ರಲ್ಲಿ ತಾರಾನಾಥ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಳ್ಳಾರಿ ಈ ಸಂಸ್ಥೆಗೆ ಅಗತ್ಯವಿರುವ ಬೋಧಕ ಮತ್ತು ಬೋಧಕೇತರ ವೃಂದದ 28 ಹುದ್ದೆಗಳನ್ನು ಸೃಜಿಸಿ ಭರ್ತಿಮಾಡಿಕೊಳ್ಳಲು ಅನುಮತಿ ನೀಡಿರುತ್ತದೆ.<br><br>ರಾಜ್ಯ ಸಿವಿಲ್‌ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ಹುದ್ದೆಗಳಿಗೆ ನೇರನೇಮಕಾತಿ ಮಾಡಲು ಹೊಸ ಅಧಿಸೂಚನೆಗಳನ್ನು ಹೊರಡಿಸಲು ಸಿಆಸುಇಲಾಖೆ ಅನುಮತಿ ನೀಡಿದ ಕೂಡಲೇ ಕೆ.ಪಿ.ಎಸ್.ಸಿ. ಮುಖಾಂತರ ಖಾಯಂ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಅಲ್ಲಿಯವರೆಗೆ ಸದರಿ ಮಹಾವಿದ್ಯಾಲಯಕ್ಕೆ ಗುತ್ತಿಗೆ ಆಧಾರದ ಮೇಲೆ ಕನ್ಸಲ್ಟೆಂಟ್‌ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ ಸಹಾಯಕ ಪ್ರಾಧ್ಯಾಪಕರನ್ನು ನೇಮಕಮಾಡಿ ಕೊಳ್ಳಲಾಗುವುದು. |

| | | |
|---|---|---|
| ಆ) | ಡಿ.ಎಂ.ಎಫ್.ಡಿ. ಯಡಿಯಲ್ಲಿ ಖರೀದಿಸಲಾದ ರೂ. 40 ಲಕ್ಷಗಳ ಮೊತ್ತದ ಎಕ್ಸ್-ರೇ ಯಂತ್ರವನ್ನು ನಿರ್ವಹಿಸಲು ಯಾವ ತಜ್ಞರಿಲ್ಲದ ಕಾರಣ, ಆ ಯಂತ್ರವನ್ನು ಬಳಕೆಮಾಡುತ್ತಿಲ್ಲ ಎಂಬುದು ನಿಜವೇ: | ಡಿ.ಎಂ.ಎಫ್.ಡಿ. ಯಡಿಯಲ್ಲಿ ಖರೀದಿಸಲಾದ ರೂ. 40 ಲಕ್ಷಗಳ ಮೊತ್ತದ ಎಕ್ಸ್-ರೇ ಯಂತ್ರವನ್ನು ನಿರ್ವಹಿಸಲು ಪ್ರಸ್ತುತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬಳ್ಳಾರಿ ಇವರಿಂದ ಪ್ರತಿ ಸೋಮವಾರದಿಂದ ಬುಧವಾರದವರೆಗೆ 03 ದಿನಗಳವರೆಗೆ ತಾತ್ಕಾಲಿಕವಾಗಿ ಕ್ಷ-ಕಿರಣ ತಂತ್ರಜ್ಞರನ್ನು ನಿಯೋಜಿಸಲಾಗಿರುತ್ತದೆ. ಕ್ಷ-ಕಿರಣ ತಂತ್ರಜ್ಞರು ಪ್ರಸ್ತು ದಿನಾಂಕ:21.07.2025ರಂದು ಕರ್ತವ್ಯಕ್ಕೆ ವರದಿಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದುದರಿಂದ ಎಕ್ಸ್-ರೇ ಯಂತ್ರವನ್ನು ಬಳಕೆ ಮಾಡಲಾಗುತ್ತಿದೆ. |
| ಇ) | ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗವು ಬೋಧನಾ ಸಿಬ್ಬಂದಿಯ ಕೊರತೆಯಿಂದಾಗಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ಕಡಿಮೆ ಮಾಡಬೇಕೆಂದು ಶಿಫಾರಸ್ಸು ಮಾಡಿರುವುದು ನಿಜವೇ: ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದೆ? | ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗವು ಬೋಧನಾ ಸಿಬ್ಬಂದಿಯ ಕೊರತೆಯಿಂದಾಗಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ಕಡಿಮೆ ಮಾಡಬೇಕೆಂದು ಶಿಫಾರಸ್ಸು ಮಾಡಿರುತ್ತದೆ<br><br>ವಿದ್ಯಾರ್ಥಿಗಳ ಪ್ರವೇಶಾತಿಯ ಸೀಟನ್ನು ಹೆಚ್ಚಳ ಮಾಡುವಂತೆ ಕೋರಿ ಸದರಿ ಆಯೋಗದ ಅಧಿನಿಯಮ ಸಂಖ್ಯೆ 26(ಡಿ) ರಂತೆ ಮೇಲ್ಮನವಿಯನ್ನು ಸಲ್ಲಿಸಲಾಗಿತ್ತು.<br><br>ತದನಂತರ ಮಹಾವಿದ್ಯಾಲಯದಲ್ಲಿನ ಕೊರತೆಗಳನ್ನು ಶೀಘ್ರವಾಗಿ ನೀಗಿಸುವ ಬಗ್ಗೆ ನೋಟರೈಸ್ಡ್ ಅಫಿಡೆವಿಟ್ ಅನ್ನು ಆಯುಕ್ತಾಲಯದಿಂದ ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗಕ್ಕೆ ಸಲ್ಲಿಸಲಾಗಿರುತ್ತದೆ. ಅಫಿಡವಿಟ್‌ನ್ನು ಆಯೋಗವು ಮಾನ್ಯ ಮಾಡಿ ಪ್ರಸಕ್ತ 2025-26 ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆ 60 ಸೀಟುಗಳನ್ನು ಯತಾವತ್ತಾಗಿ ಮುಂದುವರೆಸಲಾಗಿದೆ. (ಅನುಬಂಧದಲ್ಲಿ ಲಗತ್ತಿಸಿದೆ). |

ಸಂಖ್ಯೆ: ಆಕುಕ 284 ಪಿಟಿಡಿ 2025

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು